ಒಂದು ಊರಿನಲ್ಲಿ ಒಬ್ಬ ಪಶುಪಾಲಕನಿದ್ದ. ಅಂದರೆ ದನಗಳನ್ನು ಸಾಕುವುದು ಅವನ ವೃತ್ತಿ. ಅವನ ಬಳಿ ನೂರಾ ಒಂದು ದನಗಳಿದ್ದವು. ಮುದಿ ಹಸು, ಹಾಲು ಕೊಡುವ ಕರುವಿನ ಹಸು, ಇನ್ನೂ ಯುವ ವಯಸ್ಸಿನ ಕನ್ನೆ ಹಸು. ನಿನ್ನೆ ಮೊನ್ನೆ ಹುಟ್ಟಿದ ಪುಟ್ಟ ಕರುವಿನಿಂದ ಹಿಡಿದು ಎರಡು ವರ್ಷದವರೆಗೆ ಬೆಳೆದ ತುಂಟ ಕರುಗಳವರೆಗೆ ಹಲವಾರು ಮುದ್ದಿನ ಕರುಗಳೂ ಸೇರಿ ನೂರಾ ಒಂದು ದನಗಳು ಅವನ ಬಳಿ ಇದ್ದವು. ಹಸುಗಳ ಹಾಲು, ಮೊಸರು, ಬೆಣ್ಣೆ, ತುಪ್ಪವನ್ನು ಹತ್ತಿರದ ಪೇಟೆ ಜನರಿಗೆ ಮಾರಿ ಅವನು ತನ್ನ ಸಂಸಾರದೊಡನೆ ಜೀವನ ಸಾಗಿಸುತ್ತಿದ್ದನು.

ಹಸುಗಳನ್ನು ಕೂಡಿಹಾಕುತ್ತಿದ್ದ ಅವನ ರೊಪ್ಪ ಕಾಡಿನ ಅಂಚಿನಲ್ಲಿತ್ತು. ಹಗಲು ಹೊತ್ತಿನಲ್ಲಿ ಹಸುಗಳನ್ನು ಮೇಯಿಸಲು ಅವನು ಕಾಡಿನ ಒಳಗೆ ಹೋಗುತ್ತಿದ್ದ. ಕಾಡಿನ ಮಧ್ಯೆ ಇದ್ದ ವಿಶಾಲ ಹುಲ್ಲುಗಾವಲಿನಲ್ಲಿ ಅವುಗಳನ್ನು ಹೊಟ್ಟೆ ತುಂಬುವಷ್ಟು ಮೇಯಿಸಿ, ಅಲ್ಲಿಯೇ ಇದ್ದ ಹರಿಯುವ ತೊರೆಯಲ್ಲಿ ಅವಕ್ಕೆ ನೀರು ಕುಡಿಸಿ ಸಂಜೆ ವೇಳೆಗೆ ರೊಪ್ಪಕ್ಕೆ ಹಿಂತಿರುಗುತ್ತಿದ್ದ. ಹಸುಗಳು ಕಾಡಿನಿಂದ ಹಿಂತಿರುಗಿ ಬರುವುದನ್ನೇ ಕಾಯುತ್ತಿದ್ದ ಮುದ್ದು ಕರುಗಳು ಅಂಬಾ... ಅಂಬಾ... ಎನ್ನುತ್ತಾ ಓಡೋಡಿ

